ಒ್ ಎಸ ನಂಃ 98–2017 ಮತ್ತು 109/2017

ಪಿ.ಡಬ್ಲ್ಯು. 2

ಇಂದು ದಿಃ 02.11.2019 ರಂದುಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃಅಸಲು ದಾವೆ 98/2017 ರ ವಾದಿ ಪರ ಶ್ರೀ.ಎಂ ಎಪ ಪಿ ವಕೀಲರಿಂದ,**

ಅಸಲು ದಾವೆ 314/2013 ರಲ್ಲಿರುವ ವಾದ ಪತ್ರ ಹಾಗೂ ಮಧ್ಯಂತರ ಅರ್ಜಿಯ ದೃಡೀಕೃತ ದಾಖಲಾತಿಯನ್ನು ನಿಪಿಃ 6 ಮತ್ತು 7 ಎಂದು, ಒಂದು ಅಂಚೆ ಲಕೋಟೆಯನ್ನು ನಿಪಿಃ 8 ಎಂದು, 2014 ರ ಸಾಲಿನ ಮತದಾರರ ಪಟ್ಟಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ 9 ಎಂದು, ಸಂಬಂದಪಟ್ಟ ಭಾಗವನ್ನು ನಿಪಿಃ 9(ಎ) ದಿಂದ 9(ಸಿ) ಎಂದು ಗುರುತಿಸಲಾಯಿತು. ಸದರಿ ನಿಪಿಃ 9 ರಲ್ಲಿ ನನಗೆ ಸಂಬಂದಪಟ್ಟಿದ್ದು ನಿಪಿಃ 9(ಎ) ಆಗಿರುತ್ತದೆ. ನನ್ನ ಹೆಸರಿನ ಬೇರೆ ಬೇರೆ ವ್ಯಕ್ತಿಗಳ ಹೆಸರುಗಳು ಕೂಡಾ ಸದರಿ ನಿಪಿಃ 9 ರಲ್ಲಿ ಇರುತ್ತವೆ. ನಿಪಿಃ 6 ರಲ್ಲಿ ಖಂಡಿಕೆ ಸಂಖ್ಯೆ "ಪ " ನನ್ನ ತಾಯಿ ಫಕೀರಪ್ಪನ ಹೆಂಡತಿ ಎಂದು ಒಪ್ಪಿಕೊಂಡಿದ್ದಾಳೆ.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎ ವಿ ಎಸ ವಕೀಲರಿಂದ,**

1. ನಿಪಿಃ 6 ರಲ್ಲಿ ಯಲ್ಲವ್ವ ಇವಳು ಫಕೀರಪ್ಪನೊಂದಿಗೆ ದಾಂಪತ್ಯ ಜೀವನ ನಡೆಸದೆ ಶಿಬಾರಗಟ್ಟಿ ಗೆ ಹೋಗಿ ಅಲ್ಲಿ ಮಡಿವಾಳಪ್ಪ ಪೋಮೋಜಿ ಎಂಬುವವರೊಂದಿಗೆ ಮದುವೆಯಾಗಿ ಅವನ ಜೊತೆ ಜೀವನ ನಡೆಸಿದ ಬಗ್ಗೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದು ನಿಪಿಃ 9 ರ ಮತದಾರರ ಪಟ್ಟಿಯ ಅನುಕ್ರಮ ಸಂಖ್ಯೆ 528 ರಲ್ಲಿ ಯಲ್ಲವ್ವ ಮಡಿವಾಳಪ್ಪ ಪೋಮೋಜಿ ಎಂದು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಅನುಕೂಲ ಆಗುವ ರೀತಿಯಲ್ಲಿ 2014 ರ ಮತದಾರರ ಪಟ್ಟಿಯಲ್ಲಿ ಹೆಸರು ಕೊಟ್ಟು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಜನನ ದಾಖಲಾತಿಯಲ್ಲೂ ಕೂಡಾ ನನ್ನ ತಂದೆಯ ಹೆಸರು ಮಡಿವಾಳಪ್ಪ ಪೋಮೋಜಿ ಎಂದು ಇರುತ್ತದೆ ಎಂದರೆ ಸರಿಯಲ್ಲ.

2. ಶಿಬಾರಗಟ್ಟಿ ಗ್ರಾಮದಲ್ಲಿ ನನ್ನ ಮನೆಯ ಸಂಖ್ಯೆ ಎಷ್ಟು ಇದೆ ಎಂದು ನನಗೆ ನೆನಪಿಲ್ಲ. ನನ್ನ ತಾಯಿ ಮತವನ್ನು ಚಲಾಯಿಸುತ್ತಾಳೆ. ಅವಳ ಹೆಸರು ಮತದಾರರ ಚೀಟಿಯಲ್ಲಿ ಎನು ಇದೆ ಎಂದು ನಾನು ನೋಡಿಲ್ಲ. ನಾನು ನನ್ನ ಅಜ್ಜ ಅಮ್ಮನೊಂದಿಗೆ ವಾಸ ಮಾಡಿಕೊಂಡಿರುತ್ತೇನೆ. ನನ್ನ ತಾಯಿ ಶಿಬಾರಗಟ್ಟಿ

ಗ್ರಾಮದಲ್ಲಿಯೇ ಪ್ರತ್ಯೇಕವಾಗಿ ವಾಸ ಮಾಡಿಕೊಂಡಿದ್ದಾಳೆ. ನನ್ನ ಸರಿಯಾದ ವಿಳಾಸವನ್ನು ಒಪ್ಪಿಕೊಳದೆ ಇದ್ದ ಕಾರಣ ನಿಪಿಃ 8 ರ ಅಂಚೆ ಲಕೋಟೆಯನ್ನು ಕೇವಲ ನೋಟಿಸ ಜಾರಿ ಮಾಡುವ ಸಲುವಾಗಿ ಅದರಲ್ಲಿರುವ ವಿಳಾಸವನ್ನು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ಸಳಕೆನವರ ಕುಟುಂಬದ ಆಸ್ತಿಯನ್ನು ಎತ್ತಿಹಾಕಬೇಕೆಂಬ ಕಾರಣದಿಂದ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ.

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.